ಅಲ್ಲ; ಅಥವಾ ತಥಾಕಥಿತ, ಪರಂಪರಾಗತ ಸತ್ತ್ವದಿಂದಲೋ, ಜೈವಿಕ ಸತ್ತ್ವದಿಂದಲೋ ಅಲ್ಲ. ನಿನ್ನಲ್ಲಿ ಯಾವ ಎಸ್ಸೆನ್ಸೂ ಇಲ್ಲ. ನೀನು ಅನ್ನುವುದು ಇಲ್ಲ. ನೀನು ಅನ್ನುವುದು ನೀನು ಮಾಡಿಕೊಳ್ಳುವ ದಿಟ್ಟ, ನೈತಿಕ ಆಯ್ಕೆಗಳ ಮೂಲಕ ಆಗುತ್ತ, ಆಗುತ್ತ ಹೋಗುವ ಒಂದು ವಿದ್ಯಮಾನ, ಅಷ್ಟೆ,' ಅನ್ನುವುದು, ಹಾಗೆಂದು ಅವರು ನನಗೆ ಬಿಡಿಸಿಹೇಳದಿದ್ದರೂ, ಅವರ ಮನಸ್ಸಿನಲ್ಲಿ, ಅವರ ಪ್ರತಿಯೊಂದು ನಡೆನುಡಿಯಲ್ಲಿ ಇತ್ತೆಂದು ತೋರುತ್ತದೆ. ಆದ್ದರಿಂದಲೇ ತೋರುಗಾಣಿಕೆ ಮತ್ತು ರೂಢಿಗತ–ವ್ಯಸನದಿಂದ ಬಂದ ನಡವಳಿಕೆಯ ಚಾಳಿಯನ್ನು ತಾತ್ತ್ವಿಕವಾಗಿ ಬಯಲುಮಾಡಿ ಟೀಕಿಸುವ ಸಾರ್ತ್ರ್‌ನ **bad faith** ಎಂಬ ನುಡಿಗಟ್ಟು ಅವರು ಮತ್ತೆಮತ್ತೆ ಬಳಸುತ್ತಿದ್ದ ಟೀಕೆಯ ಅಸ್ತ್ರವಾಗಿತ್ತು. ಆದ್ದರಿಂದ ಅವರನ್ನು **marxist existentialist** ಎಂದೋ, **left existentialist** ಎಂದೋ, **existentialist leftist** ಎಂದೋ ಸಾಕಷ್ಟು ಎಚ್ಚರದಿಂದ, ಆದರೆ ಆ ಲೇಬಲ್ಲನ್ನು ಕೂಡ ಅನುಮಾನಿಸುತ್ತ, ಗುರುತಿಸಬಹುದು.

* ರಾಜಕೀಯವಾಗಿ, ಮೊತ್ತಮೊದಲಿಗೆ, ಮತ್ತು ಅನುಮಾನಕ್ಕೆ ಎಡೆಯೇ ಇಲ್ಲದಂತೆ, ಅವರೊಬ್ಬ ವಿಶ್ವಪ್ರಜೆ ಆಗಿದ್ದರು. ಮಾರ್ಕ್ಸ್‌ವಾದ ಮತ್ತು ಕಾರ್ಮಿಕ ಚಳವಳಿಯ ಅತ್ಯುತ್ತಮ ಮಾದರಿಗಳ ರೀತಿಯಲ್ಲಿ, ಸಹೋದರತ್ವದ ಭಾವಕ್ಕೆ ಯಾವ ದೇಶ, ಯಾವ ಭಾಷೆ, ಯಾವ ಮತೀಯಪಂಥವೂ ಅಡ್ಡಿ ಆಗಕೂಡದು ಎಂಬ ದೃಢ–ನಿಶ್ಚಲ ನಿಲುವಿನ ಇಪ್ಪತ್ತನೆಯ ಶತಮಾನದ ಒಬ್ಬ ಅಂತರರಾಷ್ಟ್ರೀಯತಾವಾದಿ, ಒಬ್ಬ **internationalist** ಮತ್ತು **cosmopolitan** ಆಗಿದ್ದರು.

ಎಚ್ಚರದೊಂದು ಮಾತು. ಈ ಬರಹದಲ್ಲಿ ಹೇಳಿಕೊಂಡದ್ದು, ಇನ್ನು ಮುಂದೆ ಹೇಳಲಿರುವುದು, ಕೇವಲ ನನಗೆ ತೋರಿದ್ದೇ ಹೊರತು, ಇಲ್ಲಿನ ಯಾವ ಮಾತೂ ರಾಜಶೇಖರರ ವ್ಯಕ್ತಿತ್ವವನ್ನು, ಅವರ ಜೀವನವನ್ನು ಕುರಿತ ತೀರ್ಪಿನ ಮಾತಲ್ಲ. ಆ ಎಚ್ಚರ ಮತ್ತು ಎಚ್ಚರಿಕೆಯಿಂದ ನನ್ನನ್ನು ಬಹಳ ಕಾಡುವ ವಿಷಯವೊಂದರೊಂದಿಗೆ ಈ ಬರಹವನ್ನು ಮುಗಿಸುತ್ತೇನೆ.

ಈಗ ಇಲ್ಲಿ ಹೇಳಿಕೊಂಡ ಮಾತುಗಳ ಹಿನ್ನೆಲೆಯಲ್ಲಿ, ರಾಜಶೇಖರ ಅವರು ಭೋಳೆ ಆಗಿದ್ದರು, ಆದರ್ಶವಾದಿ ಆಗಿದ್ದರು, ಸಾಹಿತ್ಯ, ಕಲೆ, ವೈಚಾರಿಕತೆ, ಚಳವಳಿ, ಬರಹ, ಸಿದ್ಧಾಂತಗಳ ಮೂಲಕ ಮನುಷ್ಯರನ್ನು, ಮನುಷ್ಯ ಜೀವಿಯನ್ನು, ಪ್ರಪಂಚವನ್ನು ಆಮೂಲಾಗ್ರವಾಗಿ ಬದಲಾಯಿಸಿ ಸುಖೀ ಕಮ್ಯೂನಿಸ್ಟ್ ಲೋಕವೊಂದನ್ನು ಕಟ್ಟಬಹುದೆಂದು ನಂಬಿದ್ದರು ಎಂದು ತಿಳಿಯಬಾರದು.

ನನಗೆ ಯಾವಾಗಲೂ ತೋರಿದಂತೆ, ಈಗಲೂ ಕಾಡುವಂತೆ, ಅವರ ಎಲ್ಲ ವಿಚಾರ, ಬರಹ, ಆಕ್ಟಿವಿಸಮ್‌ನ ಹಿಂದೆ, ಮತ್ತು ಅದರ ಒಳಗೆ, ಆಳದಲ್ಲಿ, ಮನುಷ್ಯನಲ್ಲಿರುವ ಕೇಡು, ಆ ಕೇಡಿನ ಸಾಧ್ಯತೆ – ಇವುಗಳನ್ನು ಕಂಡುಂಡ ಒಂದು ವಿಷಾದದ ಭಾವವಿತ್ತು. ವಾಲ್ಟರ್ ಬೆಂಜಮಿನ್‌ಗೆ ಇದ್ದ ವಿಷಾದದ ಥರದ್ದು ಅದು.

ಬೆಂಜಮಿನ್‌ನ 'ಇತಿಹಾಸದ ಮೇಲಿನ ಸೂತ್ರಗಳು' (**Theses on the Philosophy of History**) ಎಂಬ ಪುಟ್ಟ ಆದರೆ ಆಳವಾದ ಒಳನೋಟಗಳುಳ್ಳ ತಾತ್ತ್ವಿಕ ಕೃತಿಯಲ್ಲಿ ಈ ಧ್ವನ್ಯರ್ಥವನ್ನು ಸೂಸುವೊಂದು ಸೂತ್ರವಿದೆ:

ಇತಿಹಾಸದ ದೇವದೂತ ಆಕಾಶದಲ್ಲಿ ರೆಕ್ಕೆಚಾಚಿ, ಭವಿಷ್ಯಕ್ಕೆ ಬೆನ್ನುಮಾಡಿ ನಿಂತಿದ್ದಾನೆ; ಆದರೂ ಅನಿವಾರ್ಯ–ನಿರಂತರ ಅದರತ್ತಲೇ ಸಾಗುತ್ತಿದ್ದಾನೆ. ಅವನ ಮುಖ ಭೂತಕಾಲದತ್ತ; ಬಾಯಿ ಕಳೆದಿದೆ; ಎವೆಯಿಕ್ಕದ ಕಣ್ಣ ತುಂಬ ಗತಕಾಲದ ಅವಶೇಷ, ವಿನಾಶದ ರಾಶಿ. ಆ ವಿನಾಶಕ್ಕೆ ಮದ್ದು ಹುಡುಕಿ, ಎಲ್ಲವನ್ನೂ ನೇರ್ಪುಗೊಳಿಸಿ, ಇಡಿಯ ಮಾಡುವ ಬಯಕೆ ಅವನಿಗೆ. ಆದರೆ, ನಾಕದತ್ತಣಿಂದ ಮಹಾಬಿರುಗಾಳಿಯೊಂದು ಬೀಸಿ ಬರುತ್ತಿದೆ. ಅದರ ಬಿರುಸು ಭಯಂಕರ: ರೆಕ್ಕೆ ಮುಚ್ಚಲಾರ ಅವನು. ಭವಿಷ್ಯದತ್ತ ಹಿಂದುಹಿಂದಕ್ಕೆ ಸಾಗಬೇಕಾದ ವಿಧಿ ಅವನದ್ದು. ವಿನಾಶದ ರಾಶಿ ಆಕಾಶದೆತ್ತರ ಬೆಳೆಯುತ್ತಿದೆ. ನಾವು ಪ್ರಗತಿ ಎಂದು ಕರೆಯುವುದು ಆ ಬಿರುಗಾಳಿಯನ್ನೇ.

ರಾಜಶೇಖರರ ದುಗುಡ, ಜೀವನಯಾನ ಆ ಬೆಂಜಮಿನ್–ದೇವದೂತನ ದುಗುಡ, ಜೀವನಯಾನ.

●